## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು

**ಸಿ.ಸಿ.ನಂ. 960/2023**

| | | |
|---|---|---|
| ಹೆಸರುಃ | ನವೀನ್ ಕುಮಾರ್ ಪಿ.ಎಸ್. | ಚಾಸಾ-3 ಫ್ರಾಸಾ-2 |
| ತಂದೆಯ ಹೆಸರುಃ | ಶ್ರೀನಿವಾಸ್ | ಸಾಕ್ಷಿಯನ್ನು ದಿ:20.11.2024 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 28 ವರ್ಷ | |
| ಉದ್ಯೋಗಃ | ಖಾಸಗಿ ಕೆಲಸ | |
| ವಾಸಸ್ಥಳಃ | ಪಡವನಹಳ್ಳಿ | |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ಆರೋಪಿಯನ್ನು ನಾನು ನೋಡಿದ್ದೇನೆ. ದಿಃ 14.04.2023 ರಂದು ಡಿ.ಎನ್.ದೊಡ್ಡಿ ಗ್ರಾಮದ ಬನಗಟ್ಟ ರಸ್ತೆಯಲ್ಲಿ ರಸ್ತೆಗಾವಲನ್ನು ಅಬಕಾರಿ ಅಧಿಕಾರಿಗಳು ಸಂಜೆ 5.30 ಗಂಟೆಯಲ್ಲಿ ನಡೆಸುತ್ತಿದ್ದರು, ನಾನು ಮತ್ತು ಚಾಸಾ.4 ಬನಗಟ್ಟ ರಸ್ತೆಯಲ್ಲಿ ನಿಂತಿದ್ದೆವು, ಅಬಕಾರಿ ಅಧಿಕಾರಿಗಳು ನಮ್ಮನ್ನು ಪಂಚರನ್ನಾಗಿ ಸಹಕರಿಸಲು ಕೇಳಿಕೊಂಡರು, ಅದಕ್ಕೆ ನಾವು ಒಪ್ಪಿ ಅಬಕಾರಿ ಅಧಿಕಾರಿಗಳ ಜೊತೆ ರಸ್ತೆಗಾವಲು ನಡೆಸುತ್ತಿದ್ದ ರಸ್ತೆಗೆ ಹೋದೆವು. ಸದರಿ ರಸ್ತೆಯಲ್ಲಿ ಒಂದು ಪಲ್ಸರ್ ದ್ವಿಚಕ್ರ ವಾಹನ ಇತ್ತು, ಸದರಿ ವಾಹನದ ಪೆಟ್ರೋಲ್ ಟ್ಯಾಂಕಿನ ಮೇಲೆ ಒಂದು ಬಿಳಿ ಪ್ಲಾಸ್ಟಿಕ್ ಚೀಲವಿತ್ತು. ನಮ್ಮ ಮುಂದೆ ಶೋಧನಾ ಸಮುಚ್ಚಿತ್ತ ಆಧಾರಕ್ಕೆ ನಮ್ಮ ಸಹಿಯನ್ನು ತೆಗೆದುಕೊಂಡರು, ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ಬಿಳಿ ಚೀಲವನ್ನು ಅಬಕಾರಿ ಅಧಿಕಾರಿಗಳು ಬಿಚ್ಚಿ ನೋಡಿದಾಗ ಅದರಲ್ಲಿ 3 ಬ್ರಾಂಡ್ಗಳ ಮದ್ಯದ ಟೆಟ್ರಾ ಪ್ಯಾಕೆಟ್ಗಳು ಇದ್ದವು. 180 ಮಿಲಿಯ 24 ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್ಗಳು, 180 ಮಿಲಿಯ 33 ಬೆಂಗಳೂರು ಮಾಲ್ಟ್ ಮದ್ಯದ ಟೆಟ್ರಾ ಪ್ಯಾಕೆಟ್ಗಳು, 90 ಮಿಲಿಯ 48 ಒರಿಜಿನಲ್ ಚಾಯ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕೆಟ್ಗಳು, ಒಟ್ಟು 14.580 ಲೀಟರ್ ಮದ್ಯ ಇತ್ತು.

ನಂತರ ಸದರಿ ದ್ವಿಚಕ್ರ ವಾಹನದ ದಾಖಲೆಗಳನ್ನು ಪರಿಶೀಲಿಸಿದರು. ಸದರಿ ಗಾಡಿ ನಂಬರ್ ಕೆ.ಎ.08 ಡಬ್ಲ್ಯೂ-9288 ಇತ್ತು. ಆರೋಪಿ ಸದರಿ ದ್ವಿಚಕ್ರ ವಾಹನ ನನ್ನ ವಾಹನ ಎಂದು ತಿಳಿಸಿದರು. ಎಲ್ಲಾ 3 ಬ್ರಾಂಡಿನ ಮದ್ಯದ ಪ್ಯಾಕೆಟ್ಗಳಲ್ಲಿ ತಲಾ 10 ಪ್ಯಾಕೆಟ್ಗಳಂತೆ ಒಟ್ಟಾರೆ 30

ಪ್ಯಾಕೆಟ್ಟಳನ್ನು ಎಪ್.ಎಸ್.ಎಲ್ ಗೆ ಕಳುಹಿಸಲು ಒಂದು ಬಿಳಿ ಬಟ್ಟೆಯಲ್ಲಿ ಸದರಿ 30 ಪ್ಯಾಕೆಟ್ಟಳನ್ನು ಹಾಕಿ ಇಲಾಖೆ ಸೀಲ್ ಅನ್ನು ಸುತ್ತಿದ ಬಿಳಿ ಬಟ್ಟೆಗೆ ಹಾಕಿದರು. ನಂತರ ಮಾದರಿ ಸೀಲುಗಳನ್ನು ತೆಗೆದುಕೊಂಡರು. ನಂತರ ಸದರಿ ಮಾದರಿ ಸೀಲಿಗೆ ನಮ್ಮ ಸಹಿಯನ್ನು ತೆಗೆದುಕೊಂಡರು. ಸಾಕ್ಷಿಯು ನಿಪಿ.2 ರಿಂದ 5 ಮತ್ತು ನಿಪಿ.7 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ.2(ಬಿ) ರಿಂದ ನಿಪಿ.5(ಬಿ) ಮತ್ತು ನಿಪಿ.7(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ಅಬಕಾರಿ ಅಧಿಕಾರಿಗಳು ಸದರಿ ಮದ್ಯವನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಸಾಗಿಸುವುದಕ್ಕೆ ನಿಮ್ಮ ಹತ್ತಿರ ಪರಿವಾನಗಿ ಮತ್ತು ರಸೀತಿ ಇದೆಯಾ ಎಂದು ನಮ್ಮ ಮುಂದೆ ಕೇಳಿದಾಗ ಆರೋಪಿ ಇಲ್ಲ ನುಡಿದಿರುತ್ತಾರೆ.

ಸಾಕ್ಷಿಯು ನಿಪಿ.8 ರಲ್ಲಿರುವ ಪೊಟೋವನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.2 ಮಹಜರ್ ಅನ್ನು ಸಂಜೆ 5.30 ರಿಂದ 6.40 ರವರೆಗೆ ಅಬಕಾರಿ ಅಧಿಕಾರಿಗಳು ಜರುಗಿಸಿದರು. ನಂತರ ಸದರಿ ವಶಪಡಿಸಿಕೊಂಡ ಟೆಟ್ರಾ ಪ್ಯಾಕೆಟ್ಟಳನ್ನು, ವಾಹನವನ್ನು ಮತ್ತು ಆರೋಪಿಯನ್ನು ಅಬಕಾರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಸದರಿ ಮಹಜರ್ನ ಚೆಕ್ಕುಬಂದಿ ಪೂರ್ವಕ್ಕೆ–ಡಿ.ಎನ್. ದೊಡ್ಡಿ ಗ್ರಾಮಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ–ಬನಗಟ್ಟ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ–ಖಾಲೀ ಜಾಗ, ದಕ್ಷಿಣಕ್ಕೆ–ವೆಂಕಟಗಿರಿಯಪ್ಪ ದೇವಸ್ಥಾನದ ಆವರಣ. ಸಾಕ್ಷಿಯು ಮು.ಮಾ.1 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು.ಮಾ.1(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ  ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**Sd/-**
2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು